**ದಿನಾಂಕ 15.11.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಎನ್. ವಕೀಲರಿಂದಃ**

1. ವಾದಿಯು ಎಷ್ಟು ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾರ ವಿರುದ್ಧ ದಾವೆ ತಂದಿದ್ದಾರೆ ಎಂದರೆ ಸಾಕ್ಷಿಯು ಚಿಕ್ಕೀರಪ್ಪನವರ ಮೇಲೆ ದಾವೆಯನ್ನು ಒಂದು ಆಸ್ತಿಗೆ ಸಂಬಂಧಿಸಿದಂತೆ ದಾವೆ ತಂದಿದ್ದಾರೆ. ಎಫ್.ಡಿ.ಪಿ. 12/2012 ರಲ್ಲಿ ದಾವಾ ಸ್ವತ್ತು ಬಂದಿದೆ ಎಂದು ಹೇಳಿದ್ದು, ಸದರಿ ಎಫ್.ಡಿ.ಪಿ. 12/2012 ರಲ್ಲಿ ಎಷ್ಟು ಸ್ವತ್ತುಗಳಿಗೆ ರಾಜಿಯಾಗಿದೆ ಎಂದರೆ ಸಾಕ್ಷಿಯು ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ ಪಕ್ಷಗಾರರು ರಾಜಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 149/3 ರ ಜಮೀನು ಎಫ್.ಡಿ.ಪಿ. 12/2012 ರಲ್ಲಿ ಬಂದಿದ್ದು, ಸದರಿ 149/3 ರ ಜಮೀನನ್ನು ನನ್ನ ಹೆಂಡತಿ ವಾದಿ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಮನೆಯ ದಕ್ಷಿಣಕ್ಕೆ ನನ್ನ ಮನೆ ಇದೆ ಎಂದು ತಿಳಿಸಿದ್ದು, ನನ್ನ ಮನೆಯ ಖಾತೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಮನೆ 60*140 ಅಡಿ ವಿಸ್ತೀರ್ಣ ಇದೆ.
2. ನನ್ನ ಪ್ರಮಾಣ ಪತ್ರದಲ್ಲಿ ಚಕ್ಕು ಬಂದಿಯನ್ನು ತಿಳಿಸಿದ್ದು, ಸದರಿ ಚಕ್ಕುಬಂದಿಯು ಮಾಳಿಗೆ ಮನೆಗೆ ಸಂಬಂಧಿಸಿದ್ದಾ ಅಥವಾ ಮನೆಗೆ ಸಂಬಂಧಿಸಿದ್ದಾ ಎಂದರೆ ಸಾಕ್ಷಿಯು 6 ಗುಂಟೆ ಜಮೀನಿಗೆ ಸಂಬಂಧಿಸಿದ ಚಕ್ಕು ಬಂದಿ ಎಂದು ನುಡಿಯುತ್ತಾರೆ. ನನ್ನನ್ನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಶಂಕರ್ ರವರು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಶಂಕರ್ ರವರ ನನಗೆ ಏನು ಹೇಳಿ ಕೊಟ್ಟಿದ್ದಾರೋ ಹಾಗೆಯೇ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ದಕ್ಷಿಣಕ್ಕೆ ತಿಮ್ಮಪ್ಪನವರ ಜಮೀನು ಎಂದು ಚಕ್ಕು ಬಂದಿಯಲ್ಲಿ ಬರೆಸಿದ್ದು, ನಂತರ ಮೇಲೆ ಹೇಳಿದ ಮನೆಯ ದಕ್ಷಿಣಕ್ಕೆ ನನ್ನ ಮನೆ ಎಂದು ಹೇಳಿದ್ದು ಇದರಲ್ಲಿ ಯಾವುದು ಸತ್ಯ ಎಂದರೆ ಸಾಕ್ಷಿಯು ಚಿಕ್ಕೀರಪ್ಪನ ಮನೆಯ ದಕ್ಷಿಣಕ್ಕೆ ರಸ್ತೆ ಇದೆ ಎಂದು ನುಡಿಯುತ್ತಾರೆ.
3. ಎಫ್.ಡಿ.ಪಿ. 12/2012 ರಲ್ಲಿ ಚಿಕ್ಕೀರಪ್ಪನವರಿಗೆ ಆಸ್ತಿ ಬಂದಿದ್ದು, ರಾಜೀ ಪತ್ರದಲ್ಲಿ ದಾರಿ ಇರುವ ಬಗ್ಗೆ ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಆದರೆ ರಸ್ತೆ

ಹೋಗುತ್ತದೆ. ಅದು ಮೊದಲು ಸಿಮೆಂಟ್ ರಸ್ತೆಯಾಗಿದ್ದು, ಈಗ ಮಣ್ಣು ರಸ್ತೆಯಾಗಿದೆ ಎಂದು ನುಡಿಯುತ್ತಾರೆ. ಸದರಿ ರಸ್ತೆ ಯಾವ ದಿಕ್ಕಿಗೆ ಇದೆ ಎಂದರೆ ಸಾಕ್ಷಿಯು ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸೂರ್ಯ ಹುಟ್ಟುವ ಹಾಗೂ ಮುಳುಗುವ ಎರಡೂ ದಿಕ್ಕುಗಳಿಗೂ ಬರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ರಸ್ತೆ ಇಲ್ಲದೇ ಇದ್ದರೂ ಸಹ ನಾನು ಲಕ್ಷ್ಮಮ್ಮನವರ ಕಡೆಯಿಂದ ಆಸ್ತಿ ಖರೀದಿ ಮಾಡಿದ್ದು, ಅದರ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಮ್ಮನವರು ಅವರ ತವರ ಮನೆಯಲ್ಲಿಯೇ ಸುಮಾರು ವರ್ಷಗಳಿಂದ ಜಿ.ಪಿ.ಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಅವರ ಮಗ ಕರೆದುಕೊಂಡು ಹೋಗಿ ಹಸನ್ಪುರದಲ್ಲಿ ಇದ್ದಾರೆ.

4. ಲಕ್ಷ್ಮಮ್ಮನವರಿಗೆ ಪ್ರಾಪಂಚಿಕ ಜ್ಞಾನ ಮತ್ತು ವ್ಯಾವಹಾರಿಕ ಜ್ಞಾನ ಎರಡೂ ಇತ್ತು ಎಂದರೆ ಸರಿ. ಒಂದುವೇಳೆ ರಸ್ತೆ ಇದ್ದರೆ ಎಫ್.ಡಿ.ಪಿ. 12/2012 ರಲ್ಲಿ ಬರೆಸುತ್ತಿದ್ದರು, ಇಲ್ಲದ ಕಾರಣ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯ ಪಿ.ಎ. ಹೋಲ್ಡರ್ ಶಂಕರ್ ರವರು ಹೇಳಿ ಕೊಟ್ಟಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಮ್ಮನವರು ಅವರ ಎಲ್ಲಾ ಆಸ್ತಿಗಳನ್ನು ಒಂದೊಂದಾಗಿ ಮಾರಾಟ ಮಾಡಿದ್ದು, ಅವರ ಆಸ್ತಿಗಳನ್ನು ನಾವೂ ಖರೀದಿ ಮಾಡಿದ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**